**ದಿನಾಂಕ :20–11–2021 ರಂದು ಶನಿವಾರ ಮಧ್ಯಾಹ್ನ 3:00 ಗಂಟೆಗೆ ಅನ್ನಸಂದ್ರ ಪಾಳ್ಯದ, ಬಿ.ಬಿ.ಎಂ.ಪಿ ಯೋಗ ಸೆಂಟರ್‌ನಲ್ಲಿ ವಾರ್ಡ್ ಸಂಖ್ಯೆ:87ರ, ಶ್ರೀ.ವಿಜಯ ಕುಮಾರ್ ಸಹಾಯಕ ಕಾರ್ಯಪಾಲಕ ಅಭಿಯಂತರರು (Nodel Officer) ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು.**

**ಹಾಜರಿದ್ದ ಅಧಿಕಾರಿಗಳು :**

| | |
|---|---|
| 1. | ಶ್ರೀ. ಜಿ.ಡಿ.ಸೋಮಯ್ಯ (ಸಹಾಯಕ ಅಭಿಯಂತರರು) |
| 2. | ಶ್ರೀ. ರಂಗನಾಥ, (ಕಿರಿಯ ಆರೋಗ್ಯ ಪರಿವೀಕ್ಷಕರು) |
| 3. | ಶ್ರೀ. ರಾಜು (ಎ.ಎಸ್.ಐ ) |
| 4. | ಶ್ರೀ. ಯುಕ್ತಿಯಾರ್ |
| 5. | ಶ್ರೀ. ಶಬೀರ್ |
| 6. | ಶ್ರೀ. ಬಿ.ಸಿ.ಮುರುಗ |
| 7. | ಶ್ರೀ. ಎನ್.ಲಕ್ಷ್ಮಿಕಾಂತ್ |
| 8. | ಶ್ರೀ. ನರಸಿಂಹ ಮೂರ್ತಿ |
| 9. | ನಿವಾಸಿ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸಾರ್ವಜನಿಕರು |

ಮಾನ್ಯ ಅಧ್ಯಕ್ಷರು ಹಾಜರಿದ್ದ ಅಧಿಕಾರಿಗಳು, ವಾರ್ಡ್ ಸಮಿತಿ ಸದಸ್ಯರು ಹಾಗೂ ರೆಸಿಡೆಂಟ್ಸ್ ವೆಲ್ಪೇರ್ ಆಸೋಸಿಯೆಷನ್‌ನ ಅಧ್ಯಕ್ಷರುಗಳು, ಪ್ರತಿನಿಧಿಗಳು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸುತ್ತಾ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ಈ ಹಿಂದೆ ನಡೆದ ಸಭೆಯ ನಡವಳಿಗಳನ್ನು ಓದಿ ರೆಕಾರ್ಡ್ ಮಾಡಲಾಯಿತು.

1) **ಕೋವಿಡ್–19 ಸಾಂಕ್ರಮಿಕ ರೋಗಕ್ಕೆ ಸಂಬಂಧಿಸಿದಂತೆ, ಸಂಭಾವ್ಯ ಮೂರನೇ ಅಲೆಯನ್ನು ನಿಯಂತ್ರಿಸುವ ಬಗ್ಗೆ ಮತ್ತು ಸೋಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಂಜಾಗ್ರತ ಕ್ರಮಗಳ ಬಗ್ಗೆ.**

ಈ ಕುರಿತು ಚರ್ಚಿಸಲಾಗಿ, ವಾರ್ಡ್‌ಗೆ ಸಂಬಂಧಿಸಿದ ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್‌ನಲ್ಲಿ ಕೋವಿಡ್–19 ಸಂಭಾವ್ಯ ಮೂರನೇ ಅಲೆಗೆ ಸಂಬಂಧಪಟ್ಟ ಸೋಂಕು ಹರಡುವುದನ್ನು ತಡೆಗಟ್ಟುವ ಎಲ್ಲಾ ಮುಂಜಾಗೃತ ಕ್ರಮಗಳನ್ನು ತೆಗೆದುಕೊಳ್ಳುತ್ತಿರುವುದಾಗಿ ತಿಳಿಸಿರುತ್ತಾರೆ.

2) **ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರು ಹಾಗೂ ಒಳಚರಂಡಿಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ**

ವಾರ್ಡ್ ವ್ಯಾಪ್ತಿಯ ರಮೇಶ್‌ನಗರ, ಜಗದೀಶ್‌ನಗರ, ಯಲ್ಲಮ್ಮ ದೇವಸ್ಥಾನ ರಸ್ತೆ ಅನ್ನಸಂದ್ರಪಾಳ್ಯ ಹಾಗೂ ರೆಡ್ಡಿಪಾಳ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಹಾಗೂ ಒಳಚರಂಡಿಯ ಸಮಸ್ಯೆ ಇದ್ದು ಸಮಸ್ಯೆಗಳನ್ನು ಬಗೆಹರಿಸುವಂತೆ ಸಾರ್ವಜನಿಕರು ಕೋರಿರುತ್ತಾರೆ, ಸಮಸ್ಯೆಗಳನ್ನು ಬಗೆಹರಿಸುವಂತೆ ಸಂಬಂಧಪಟ್ಟ

ಬಿ.ಡಬ್ಲ್ಯು.ಎಸ್.ಎಸ್.ಬಿ ಸಹಾಯಕ ಅಭಿಯಂತರರಿಗೆ ತಿಳಿಸಲು ಸಭೆಯಲ್ಲಿ ಹಾಜರಿದ್ದ ಕೆಲಸ ಪರಿವೀಕ್ಷರಿಗೆ ತಿಳಿಸಲಾಯಿತು.

### 3) ವಾರ್ಡ್‌ನ ವಿವಿಧ ಕಾಮಗಾರಿಗಳ ಅಭಿವೃದ್ಧಿ ಕಾರ್ಯಗಳ ಬಗ್ಗೆ :-

ವಾರ್ಡ್‌ನ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸಲಾಗಿದ್ದು ಇಸ್ಲಾಂಪುರ 1ನೇ ಮುಖ್ಯರಸ್ತೆ ಹಾಗೂ ರಮೇಶ್ ನಗರ ಮುಖ್ಯರಸ್ತೆಯಲ್ಲಿ ಚರಂಡಿಯ ಹೂಳೆತ್ತಲು ಹಾಗೂ ರಸ್ತೆ ಕಾಮಗಾರಿಯನ್ನು ಮಾಡುವಂತೆ ಸಾರ್ವಜನಿಕರು ಕೋರಿರುತ್ತಾರೆ, ಸದರಿ ಕಾಮಗಾರಿಯನ್ನು ಕೈಗೊಳ್ಳುವಂತೆ ಸಭೆಯಲ್ಲಿ ಸಂಬಂಧಪಟ್ಟ ವಾರ್ಡ್ ಅಭಿಯಂತರರಿಗೆ ಸೂಚಿಸಲಾಯಿತು.

### 4) ಬೀದಿ ದೀಪಗಳ ನಿರ್ವಹಣೆ ಬಗ್ಗೆ:-

ವಾರ್ಡ್ ವ್ಯಾಪ್ತಿಯಲ್ಲಿ ಬರುವ ರಮೇಶ್‌ನಗರ ಮುಖ್ಯರಸ್ತೆ,ಅನ್ನಸಂದ್ರಪಾಳ್ಯ ಮುಖ್ಯರಸ್ತೆ ಬೀದಿ ದೀಪಗಳ ಸಮರ್ಪಕವಾಗಿ ನಿರ್ವಹಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಯಿತು.

### 5) ಒಳಚರಂಡಿ ಚೇಂಬರ್ ಎತ್ತರ ಮಾಡುವ ಬಗ್ಗೆ:-

ವಾರ್ಡ್ ವ್ಯಾಪ್ತಿಯಲ್ಲಿ ಬರುವ ಅನ್ನಸಂದ್ರ ಪಾಳ್ಯ, ಜಗದೀಶ್‌ನಗರ ,ವಿನಾಯಕನಗರ ಹಾಗೂ ಇಸ್ಲಾಂಮ್‌ಪುರ ಮುಖ್ಯರಸ್ತೆಯಲ್ಲಿ ಬರುವ ಒಳಚರಂಡಿಯ ಚೇಂಬರ್‌ಗಳು ರಸ್ತೆಯ ಮೇಲ್ಮೈಗಿಂತ ತಗ್ಗಾಗಿದ್ದು ರಸ್ತೆಯಲ್ಲಿ ಗುಂಡಿಗಳಾಗಿ ಮಾರ್ಪಾಟ್ಟಿದು ಸಾರ್ವಜನಿಕರು ಒಡಡಲು ತೊಂದರೆ ಅಗುತ್ತಿದ್ದು ಚೇಂಬರ್‌ಗಳನ್ನು ಎತ್ತರ ಮಾಡಬೇಕೆಂದು ಸಾರ್ವಜನಿಕರು ಕೋರಿರುತ್ತಾರೆ. ಇದರ ಬಗ್ಗೆ ಕ್ರಮತೆಗೆದುಕೊಳ್ಳಲು ಸಂಬಂಧಪಟ್ಟ ಬಿ.ಡಬ್ಲ್ಯು.ಎಸ್.ಎಸ್.ಬಿ ಸಹಾಯಕ ಅಭಿಯಂತರರಿಗೆ ತಿಳಿಸಲು ಸಭೆಯಲ್ಲಿ ಹಾಜರಿದ್ದ ಕೆಲಸ ಪರಿವೀಕ್ಷರಿಗೆ ತಿಳಿಸಲಾಯಿತು.

### 6) ಇಸ್ಲಾಂಪುರದಲ್ಲಿನ ಹೆಚ್.ಎ.ಎಲ್ ಕಾಂಪೌಂಡ್ ಗೋಡೆಯು ಹಾಳಾಗಿರುವ ಬಗ್ಗೆ:-

ವಾರ್ಡ್ ವ್ಯಾಪ್ತಿಯಲ್ಲಿ ಬರುವ ಇಸ್ಲಾಂಪುರ ಮುಖ್ಯರಸ್ತೆ ಹಾಗೂ ಕೃಷ್ಣ ಅಪಾರ್ಟ್‌ಮೆಂಟ್ ರಸ್ತೆಯಲ್ಲಿರುವ ಹೆಚ್.ಎ.ಎಲ್ ಕಾಂಪೌಂಡ್ ಹಾಳಾಗಿ ಬೀಳುವ ಹಂತದಲ್ಲಿದ್ದು ಸದರಿ ಕಾಂಪೌಂಡ್ ಗೋಡೆಯನ್ನು ತೆರವುಗೊಳಿಸಿ ಕಾಂಪೌಂಡ್ ಗೋಡೆಯನ್ನು ಪುನರ್ ನಿರ್ಮಿಸಿಸುವಂತೆ ಸಾರ್ವಜನಿಕರು ಕೋರಿರುತ್ತಾರೆ. ಇದರ ಬಗ್ಗೆ ಕ್ರಮ ತಗೆದುಕೊಳ್ಳಲು ಹೆಚ್.ಎ.ಎಲ್ ಕಂಪನಿಯವರಿಗೆ ಪತ್ರವನ್ನು ರವಾನಿಸಲಾಗಿದೆ.

### 7) ವಾರ್ಡ್ ವ್ಯಾಪ್ತಿಯಲ್ಲಿ ಪೌರ ಕಾರ್ಮಿಕರ ಸಂಖ್ಯೆ ಹೆಚ್ಚಿಸುವ ಬಗ್ಗೆ:-

ವಾರ್ಡ್ ವಾಪ್ತಿಯಲ್ಲಿ ಘನತ್ಯಾಜ್ಯ ವಿಲೇವಾರಿಯು ಸರ್ಮಪಕವಾಗಿ ನೇರವೇರುತ್ತಿಲ್ಲವೆಂದು ಸಾರ್ವಜನಿಕರು ದೂರಿರುತ್ತಾರೆ, ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರು ಮಾತಾನಾಡಿ ವಾರ್ಡ್ ವ್ಯಾಪ್ತಿಗೆ ಮುಂಜುರಾದ ಪೌರ ಕಾರ್ಮಿಕರ ಸಂಖ್ಯೆಯು 72 ಆದರೆ ಪ್ರಸ್ತುತ ಇರುವ ಪೌರ ಕಾರ್ಮಿಕರ ಸಂಖ್ಯೆ 40 ಹಾಗು 40ರಲ್ಲಿ ಪ್ರತಿ ದಿನ 10 ಪೌರ ಕಾರ್ಮಿಕರ ರಜೆ ಮೇಲೆ ಗೈರು ಹಾಜರಗುವದರಿಂದ ಘನತ್ಯಾಜ್ಯ ವಿಲೇವಾರಿಯನ್ನು ಸರ್ಮಪಕವಾಗಿ ನೇರವೇರಿಸಲಾಗುತ್ತಿಲ್ಲವೆಂದು ತಿಳಿಸಿರುತ್ತಾರೆ, ಆದ್ದರಿಂದ್ದ ವಾರ್ಡ್ ಸಂಖ್ಯೆ-87 ಹೆಚ್.ಎ.ಎಲ್ ಏರ್‌ಪೋರ್ಟ್ ವ್ಯಾಪ್ತಿಯಲ್ಲಿ ಮುಂಜುರಾಗಿರುವ ಬಾಕಿ ಇರುವ 32 ಪೌರ ಕಾರ್ಮಿಕರನ್ನು ಕೂಡಲೆ ನೇಮಿಸಬೇಕೆಂದು ಸಹಾಯುಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯಾ ನಿರ್ವಹಣೆ ಅಧಿಕಾರಿಗಳಿಗೆ ಪತ್ರ ಬರೆಯಲು ತೀರ್ಮಾನಿಸಲಾಯಿತು.

8) **<u>ಇಸ್ಲಾಂಪುರ ಸರ್ಕಲ್ ಬಳಿ ಇರುವ ಹಳೆ ಎ.ಸಿ. ಶೀಟ್ ಕೊಠಡಿಯನ್ನು (ಪೊಲೀಸ್ ಚೌಕಿ) ತೆರವುಗೊಳಿಸುವ ಬಗ್ಗೆ.</u>**

ವಾರ್ಡ್ ವ್ಯಾಪ್ತಿಯಲ್ಲಿ ಬರುವ ಇಸ್ಲಾಂಪುರದ ಸರ್ಕಲ್ ಬಳಿ ಹಳೆ ಎ.ಸಿ. ಶೀಟ್ ಕೊಠಡಿಯಿದ್ದು, (ಪೊಲೀಸ್ ಚೌಕಿ) ಸದರಿ ಕೊಠಡಿಯಲ್ಲಿ ಯಾವುದೇ ಪೊಲೀಸ್ ಸಿಬ್ಬಂದಿಯು ಕಾರ್ಯನಿರ್ವಹಿಸುತ್ತಿರುವುದಿಲ್ಲ, ಆದ್ದರಿಂದ ಸದರಿ ಕೊಠಡಿಯನ್ನು ತೆರವುಗೊಳಿಸಲು ಸಾರ್ವಜನಿಕರು ಒತ್ತಾಯಿಸಿರುತ್ತಾರೆ. ಹಾಗೂ ಸದರಿ ಕೊಠಡಿಯನ್ನು ಚರಂಡಿಯ ಮೇಲೆ ನಿರ್ಮಿಸಿದ್ದು ಚರಂಡಿಯ ಹೂಳನ್ನು ತೆಗೆಯಬೇಕಾಗಿರುತ್ತದೆ, ಇದರಿಂದ ಚರಂಡಿ ನೀರು ಸರ್ಮಪಕವಾಗಿ ಹರಿದು ಹೊಗಲು ಅನುಕೂಲವಾಗುತ್ತದೆ. ಆದ್ದರಿಂದ ಸದರಿ ಕೊಠಡಿಯನ್ನು ತೆರವುಗೊಳಿಸುವ ಬಗ್ಗೆ ಪೋಲಿಸ್ ಇನ್ಸ್‌ಪೆಕ್ಟರ್ ಕಾನೂನು ಮತ್ತು ಸುವ್ಯವಸ್ಥೆ ಮತ್ತು ಸಂಚಾರಿ ಪೋಲಿಸ್ ಇಲಾಖೆಯವರು ಸದರಿ ಕೊಠಡಿಗೆ ಸಂಬಂದಿಸಿದ ವಿಷಯಗಳ ಬಗ್ಗೆ ಮಾಹಿತಿಯೊಂದಿಗೆ ಮುಂದಿನ ವಾರ್ಡ್ ಸಮಿತಿ ಸಭೆಗೆ ಹಾಜರಾಗಲು ಸೂಚಿಸಲಾಯಿತು.

ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳು
ವಾರ್ಡ್ ನಂ.87 ಹೆಚ್.ಎ.ಎಲ್ ಏರ್‌ಪೋರ್ಟ್

ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ
ನೊಡೆಲ್ ಅಧಿಕಾರಿಗಳು

**ಪ್ರತಿಯನ್ನು:**

1. ಮಾನ್ಯ ಜಂಟಿ ಆಯುಕ್ತರು, ಮಹದೇವಪುರ ವಲಯ ರವರ ಮಾಹಿತಿಗಾಗಿ ರವಾನಿಸಿದೆ.
2. ಮುಖ್ಯ ಅಭಿಯಂತರರು, ಮಹದೇವಪುರ ವಲಯ ರವರ ಮಾಹಿತಿಗಾಗಿ ರವಾನಿಸಿದೆ.
3. ಸಹಾಯಕ ಕಾರ್ಯಪಾಲಕ ಅಭಿಯಂಯತರರು, ಘಣ ತಾಜ್ಯ ನಿರ್ವಹಣೆ ಕೆ.ಆರ್.ಪುರಂ ರವರ ಮಾಹಿತಿಗಾಗಿ ಕಳುಹಿಸಿದೆ.
4. ಕಛೇರಿ ಪ್ರತಿ.